# ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ
# PILIKULA DEVELOPMENT AUTHORITY

ನಂ.ಪಿಡಿಎ(1) ಸಿಆರ್:64/ಆ&ಆ ಅಧಿಕಾರ/2021-22 ದಿ.31.05.2021

## ನಡವಳಿಗಳು

ವಿಷಯ: ಪಿಲಿಕಳ ಅಭಿವೃದ್ಧಿ ಪ್ರಾಧಿಕಾರ – ಆರ್ಥಿಕ ಮತ್ತು ಆಡಳಿತಾತ್ಮಕ ಅಧಿಕಾರಗಳ ಪ್ರತ್ಯಾಯೋಜನೆ – ಆದೇಶ ಹೊರಡಿಸಿರುವುದು.

ಉಲ್ಲೇಖ: ಕರ್ನಾಟಕ ಸರಕಾರದ ಅಧಿಸೂಚನೆ ಸಂಖ್ಯೆ ಸಂವ್ಯಾಶಾಇ 08 ಶಾಸನ 2018 ದಿ.09.03.2018

******

ಸರಕಾರವು ಮೇಲಿನ ಅಧಿಸೂಚನೆಯಂತೆ ಡಾ.ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮ ಸೊಸೈಟಿ ಮತ್ತು ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರವನ್ನು ಒಟ್ಟುಗೂಡಿಸಿ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರವನ್ನಾಗಿ ರಚಿಸಿ ಆದೇಶಿಸಿದೆ. ಈ ಪ್ರಾಧಿಕಾರದಲ್ಲಿ ಕೈಗೊಳ್ಳುವ ಬೇರೆ ಬೇರೆ ಅಭಿವೃದ್ಧಿ ಕೆಲಸಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಲ್ಲಿ ಪಾರದರ್ಶಕತೆ ಅಧಿನಿಯಮ 1999 ರಡಿ ಪಾರದರ್ಶಕವಾಗಿ ಕೈಗೊಳ್ಳಲಾಗುತ್ತಿದೆ.

ಪಿಲಿಕುಳ ಅಭಿವೃದ್ಧಿ ಕಾಯಿದೆ 2018ರಡಿ ರಚಿತವಾದ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ನಿಯಮಗಳಡಿ ನಿಯಮ 4ರಂತೆ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಮಂಜೂರು ನೀಡುವ ಅಧಿಕಾರ ಪ್ರತ್ಯಾಯೋಜನೆಯಾಗಿದ್ದರೂ ಪಾರದರ್ಶಕತೆ ಅಧಿನಿಯಮಗಳಂತೆ ಟೆಂಡರ್ ಕರೆಯುವ, ಅಂಗೀಕರಿಸುವ ಮತ್ತು ಟೆಂಡರ್ ಪ್ರಕ್ರಿಯೆಗಳಿಂದ ಭಾದಿತರು ಅಪೀಲು ಸಲ್ಲಿಕೆಗೆ ಪ್ರಾಧಿಕಾರ ನಿಯಮಗಳಡಿ ಅವಕಾಶವನ್ನು ಕಲ್ಪಿಸದಿರವುದರಿಂದ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಕಾಯಿದೆಯ ಕಲಂ 11ರಡಿ ಪ್ರಾಧಿಕಾರದ ಚೇರ್‌ಮೆನ್‌ರಿಗೆ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಮುಂದಿನ ಪ್ರಾಧಿಕಾರ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯುವ ಷರತ್ತುಗಳಿಗೆ ಒಳಪಟ್ಟು ಈ ಕೆಳಕಂಡಂತೆ ಅಧಿಕಾರ ವ್ಯಾಪ್ತಿಯನ್ನು ಹಂಚಿಕೆ ಮಾಡುವುದು ಸೂಕ್ತವಾಗಿದೆ. ಅಂತೆಯೇ ಆದೇಶ,

## ಆದೇಶ

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ 2018 ರ ಕಲಂ 11ರಲ್ಲಿ ದತ್ತವಾಗಿರುವ ವಿಶೇಷ ಅಧಿಕಾರವನ್ನು ಚಲಾಯಿಸಿ ಈ ಕೆಳಗಿನ ವಿಷಯಗಳಿಗೆ ಅಧಿಕಾರ ವ್ಯಾಪ್ತಿಯನ್ನು ಮುಂದಿನ ಪ್ರಾಧಿಕಾರ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯುವ ಷರತ್ತುಗಳೊಂದಿಗೆ ಹಂಚಿಕೆ ಮಾಡಿ ಆದೇಶಿಸಿದೆ.

| ಕ್ರ.ಸಂ | ವಿಷಯ | ಅಧಿಕಾರ ವ್ಯಾಪ್ತಿ |
|---|---|---|
| 1 | ಕೆಟಿಪಿಪಿ ಕಾಯ್ದೆಯ ಕಲಂ 9ರಂತೆ ಪ್ರಾಧಿಕಾರದ ಅಭಿವೃದ್ಧಿ ಕಾಮಗಾರಿ/ಯೋಜನೆಗಳ/ಸೇವೆಗಳ/ಸರಕುಗಳ ಟೆಂಡರ್ ಕರೆಯುವುದು | ಆಯುಕ್ತರು |
| 2 | ಮೇಲಿನಂತೆ ಕರೆದ ಟೆಂಡರ್ ಅನುಮೋದನೆ ಮತ್ತು ಅಂಗೀಕರಿಸುವುದು | ಆಯುಕ್ತರು |
| 3 | ಕಾಮಗಾರಿಗಳನ್ನು ಗುತ್ತಿಗೆದಾರರಿಗೆ ವಹಿಸುವುದು ಗುತ್ತಿಗೆದಾರರೊಂದಿಗೆ ಕರಾರು ಮಾಡಿಕೊಳ್ಳುವುದು | ಆಯುಕ್ತರು |
| 4 | ಕೆಟಿಪಿಪಿ ಕಾಯ್ದೆಯ ಕಲಂ 16ರಂತೆ ಟೆಂಡರ್ ಪ್ರಕ್ರಿಯೆಗಳಿಂದ ಭಾದಿತರು ಅಪೀಲು ಸಲ್ಲಿಕೆ | ಚೇರ್‌ಮೆನ್/ ದ.ಕ. ಜಿಲ್ಲಾಧಿಕಾರಿಯವರು |

ಚೇರ್‌ಮೆನ್
ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಹಾಗೂ
ಜಿಲ್ಲಾಧಿಕಾರಿಯವರು, ದ.ಕ ಜಿಲ್ಲೆ

ಪ್ರತಿ: 1) ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಎಲ್ಲಾ ವಿಭಾಗಗಳ ಮುಖ್ಯಸ್ಥರಿಗೆ
2) ಯೋಜನಾ ಅಭಿಯಂತರರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ
3) ಸುತ್ತೋಲೆ ಕಡತಕ್ಕೆ

DESPATCHED
DATE: 5/6/2021